ದಿನಾಂಕ 10.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ದೂರುದಾರರ ಪರ ಶ್ರೀ.ಬಿ.ಕೆ.ಎನ್., ವಕೀಲರಿಂದಃ-**

**1.** ನಾನು ಕಳೆದ 20 ವರ್ಷಗಳಿಂದ ಕರ್ಪೂರ ಮತ್ತು ಅಗರಬತ್ತಿ ವ್ಯಾಪಾರ ಮಾಡುತ್ತಿದ್ದೇನೆ. ನನ್ನ ವ್ಯವಹಾರ ರಾಣಿಬೆನ್ನೂರಿನಲ್ಲಿ ಇದೆ. ನನ್ನ ವ್ಯಾಪಾರಿ ಸಂಸ್ಥೆಯ ಹೆಸರು Sri.Renuka Products ಎಂದು ಇರುತ್ತದೆ. ಕರ್ಪೂರ ತಯಾರಿಸಲು ಬೇಕಾಗುವ ಪೌಡರನ್ನು ದೂರುದಾರ ಸಂಸ್ಥೆಯಿಂದ ಖರೀದಿಸಿ ನಾವು ಕರ್ಪೂರವನ್ನು ತಯಾರಿಸುತ್ತೇವೆ. ನಮಗೆ ಬೇಕಾದ ಗಾತ್ರ ಮತ್ತು ಆಕಾರದ ಕರ್ಪೂರವನ್ನು ನಾವು ತಯಾರಿಸುತ್ತೇವೆ. ದೂರುದಾರ ಸಂಸ್ಥೆಯು ನಮಗೆ ಕಿಲೋ ಲೆಕ್ಕದಲ್ಲಿ ಪೌಡರನ್ನು ಪೂರೈಕೆ ಮಾಡುತ್ತಾರೆ. ಅವರು ನಮಗೆ ಮಾಲು ಕಳುಹಿಸುವಾಗ ಅದಕ್ಕೆ ಸಂಬಂಧಿಸಿದಂತೆ ಒಂದು ಇನ್‌ವಾಯ್ಸನ್ನು raise ಮಾಡುತ್ತಾರೆಂದರೆ ಸರಿ. ಆ ಇನ್‌ವಾಯ್ಸನ ಬಾಬ್ತು ಹಣ ಪಾವತಿ ಮಾಡಲು 30 ದಿನಗಳ ಕಾಲವಕಾಶ ಇರುತ್ತದೆ.

**2.** ಗೀತಾ ಉಮೇಶ್ ಆಪ್ಟೆ ಈಕೆ ನನ್ನ ಪತ್ನಿ. ಆಕೆಯ ಹೆಸರಿನಲ್ಲಿ Sri.Yelukoti Products ಎಂಬ ಹೆಸರಿನ ವ್ಯಾಪಾರಿ ಸಂಸ್ಥೆ ನೊಂದಣಿಯಾಗಿದೆ. ಆ ಸಂಸ್ಥೆಯು ರಾಣಿಬೆನ್ನೂರು ಪಟ್ಟಣದ ಪಂಪಾನಗರದಲ್ಲಿದೆ. ನನ್ನ ಬಾಬ್ತು Sri.Renuka Products ಮತ್ತು ನನ್ನ ಪತ್ನಿಯ ಹೆಸರಿನಲ್ಲಿರುವ Sri.Yelukoti Products ಸಂಸ್ಥೆಗಳಿಗೆ ಕರ್ಪೂರದ ಪೌಡರ್ ಪೂರೈಕೆ ಮಾಡಲು ನಾನೇ ಆರ್ಡರನ್ನು ದೂರುದಾರ ಸಂಸ್ಥೆಗೆ ಕೊಡುತ್ತೇನೆ. ಈ ಕೇಸಿಗೆ ಸಂಬಂಧಿಸಿದ ಇನ್‌ವಾಯ್ಸಗಳನ್ನು ಹೊರತುಪಡಿಸಿ ದೂರುದಾರರು raise ಮಾಡಿದ ಉಳಿದ ಇನ್‌ವಾಯ್ಸಗಳ ಹಣವನ್ನು ನಾನು ಈಗಾಗಲೇ ದೂರುದಾರರಿಗೆ ಸಂದಾಯ ಮಾಡಿದ್ದೇನೆ.

**3.** ಈ ಕೇಸಿನ ಚೆಕ್ಕು ಅಮಾನ್ಯಗೊಂಡ ನಂತರ ದೂರುದಾರರು ನನಗೆ ದಿ.11.10.2023 ರ ನೋಟೀಸನ್ನು ನೀಡಿದ್ದಾರೆಂದರೆ ಸರಿ. ಆ ನೋಟೀಸು ನನಗೆ ದಿ.23.10.2023 ರಂದು ತಲುಪಿದೆ ಎಂದರೆ ಸರಿ. ಆ ನೋಟೀಸಿಗೆ 15 ದಿನಗಳೊಳಗೆ ನಾನು ಉತ್ತರವನ್ನು ಕೊಡಲಿಲ್ಲ. ನೋಟೀಸಿನ ಬಗ್ಗೆ ನಾನು PW1 ರವರನ್ನು ವಿಚಾರಿಸಿದ್ದು, ಅದರ ಬಗ್ಗೆ ನೀವೇನೂ ತಲೆ ಕೆಡಿಸಿಕೊಳ್ಳಬೇಡಿ ಎಂದು ಅವರು ನನಗೆ ಹೇಳಿದ್ದರು ಎಂದು ಸಾಕ್ಷಿಯು ಮುಂದುವರೆದು ಹೇಳುತ್ತಾರೆ. ನಾನು ಕೊಟ್ಟ ನಿಡಿ.6 ಉತ್ತರ ತಲುಪುವ ಮೊದಲೇ

This is a True Copy of the Court Records Online. Authenticated @ districts.ecourtsindia.com/cnr/KABC0C0355092023/truecopy/order-5.pdf

ದೂರುದಾರರು ಈ ದೂರನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು ಎಂದರೆ, ನೋಟೀಸು ಅವರಿಗೆ ದಿ.05.12.2023 ರಂದು ತಲುಪಿತ್ತು ಎಂದು ಸಾಕ್ಷಿಯು ಹೇಳುತ್ತಾರೆ. ನಿಡಿ.6 ನೋಟೀಸು ದೂರುದಾರರಿಗೆ ಯಾವಾಗ ತಲುಪಿದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಲಿಲ್ಲ.

**4.** ನನ್ನ ಪತ್ನಿಯ ಬಾಬ್ತು Sri.Yelukoti Products ಸಂಸ್ಥೆಗೆ ದೂರುದಾರರು ಪೂರೈಕೆ ಮಾಡಿದ ಕರ್ಪೂರದ ಪೌಡರನ್ನು ದೂರುದಾರರು ವಾಪಾಸ್ಸು ಪಡೆದುಕೊಂಡು ಬೇರೆ ಕರ್ಪೂರದ ಪೌಡರನ್ನು ಕೊಟ್ಟಿದ್ದಾರೆಂದರೆ, ಅದನ್ನು ಕೂಡಾ ವಾಪಾಸ್ಸು ಪಡೆದುಕೊಂಡು ಬೇರೆ ಕರ್ಪೂರದ ಪೌಡರನ್ನು ಕೊಟ್ಟಿದ್ದಾರೆಂದು ಸಾಕ್ಷಿಯು ಹೇಳುತ್ತಾರೆ. ನಿಪಿ.8 ಮತ್ತು 9 ರ ಇನ್‌ವಾಯ್ಸಗಳಡಿ ದೂರುದಾರರು ಪೂರೈಕೆ ಮಾಡಿದ ಕರ್ಪೂರದ ಪೌಡರಿನಲ್ಲಿ ಯಾವುದೇ ದೋಷ ಇರಲಿಲ್ಲವೆಂದರೆ ಸರಿಯಲ್ಲ. Sri.Yelukoti Products ಸಂಸ್ಥೆಗೆ ದೂರುದಾರರು ಪೂರೈಕೆ ಮಾಡಿದ ಕರ್ಪೂರದ ಪೌಡರನ ಭಾವಚಿತ್ರಗಳನ್ನು ಈ ಕೇಸಿನಲ್ಲಿ ಹಾಜರು ಮಾಡಿ, ದೂರುದಾರರ ವಿರುದ್ಧ ಸುಳ್ಳು ಆರೋಪವನ್ನು ಹೊರಿಸುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಸಂಸ್ಥೆಗೆ ದೂರುದಾರರು ಪೂರೈಕೆ ಮಾಡಿದ ಕರ್ಪೂರದ ಪೌಡರಿನಲ್ಲಿ ದೋಷ ಇದೆ ದೂರುದಾರರಿಗೆ ನಾನು ತಿಳಿಸಲೇ ಇಲ್ಲ ಎಂದರೆ ಸರಿಯಲ್ಲ. ಕರ್ಪೂರದ ಪೌಡರಿನಲ್ಲಿ ದೋಷ ಇದೆ ಎಂದು ದೂರುದಾರರಿಗೆ ಯಾವ ರೀತಿ ತಿಳಿಸಿದ್ದೇನೆಂದು ತೋರಿಸಲು ನಾನು ದಾಖಲೆಗಳನ್ನು ಹಾಜರು ಮಾಡಲಿಲ್ಲ. ಆ ಕರ್ಪೂರದ ಪೌಡರನ್ನು ಬದಲಾಯಿಸಿ ಕೊಡುತ್ತೇನೆಂದು PW1 ರವರು ಹೇಳಿದ್ದಾರೆಂದು ನಾನು ಹೇಳುತ್ತಿರುವುದಕ್ಕೆ ಪೂರಕವಾಗಿ ದಾಖಲೆಯನ್ನು ಹಾಜರು ಮಾಡಲಿಲ್ಲ. ದೂರುದಾರರು ಪೂರೈಕೆ ಮಾಡಿದ ಕರ್ಪೂರದ ಪೌಡರಿನಲ್ಲಿ ದೋಷ ಇದೆ ಎಂದು ದೂರುದಾರರಿಗೆ ಲಿಖಿತ ರೂಪದಲ್ಲಿ ತಿಳಿಸಲು ನನಗೆ ತೊಂದರೆ ಇರಲಿಲ್ಲ. ಕರ್ಪೂರದ ಪೌಡರಿನಲ್ಲಿ ದೋಷ ಇದೆ ಎಂದು ದೂರುದಾರರಿಗೆ ಲಿಖಿತ ರೂಪದಲ್ಲಿ ಅಥವಾ ಮೌಖಿಕವಾಗಿ ನಾನು ತಿಳಿಸಲೇ ಇಲ್ಲ ಎಂದರೆ ಸರಿಯಲ್ಲ. ದೂರುದಾರರು ನನಗೆ ಪೂರೈಕೆ ಮಾಡಿದ ಕರ್ಪೂರದ ಪೌಡರಿನಲ್ಲಿ ಯಾವುದೇ ದೋಷ ಇರಲಿಲ್ಲ ಎಂದರೆ ಸರಿಯಲ್ಲ. ದೂರುದಾರರು ಪೂರೈಕೆ ಮಾಡಿದ ಕಳಪೆ ಮಟ್ಟದ ಕರ್ಪೂರದ ಪೌಡರಿನ ಬಾಬ್ತು ಹಣ ಕಳೆದು, ಉಳಿದ ಮೊತ್ತವನ್ನು ಕೊಡಿ ಎಂದು ದೂರುದಾರ ಕಂಪನಿಯು ನನಗೆ ಯಾವತ್ತೂ ಹೇಳಲಿಲ್ಲ ಎಂದರೆ ಸರಿಯಲ್ಲ.

This is a True Copy of the Court Records Online. Authenticated @ districts.ecourtsindia.com/cnr/KABC0C0355092023/truecopy/order-5.pdf

ದೂರುದಾರರು product verification ಗೆ ನನ್ನ ಮನೆಗೆ ಯಾವತ್ತೂ ಬರಲೇ ಇಲ್ಲ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ **'ದೂರುದಾರ ಸಂಸ್ಥೆಯ ಶಾಖಾ ವ್ಯವಸ್ಥಾಪಕರು ನನ್ನ ಮನೆಗೆ ಬಂದು ಮಾಲನ್ನು ಪರಿಶೀಲಿಸಿ ಅದು ಕಳಪೆ ಗುಣಮಟ್ಟದ್ದಾಗಿರುವುದನ್ನು ಅವರು ಒಪ್ಪಿಕೊಂಡಿದ್ದಾರೆ. ಹೀಗಿದ್ದರೂ ಅವರು ಡಿಫರೆನ್ಸ್ ಮೊತ್ತವನ್ನು ಕಳೆಯದೆ, ಹೊಸದಾಗಿ ಮಾಲನ್ನು ಸರಬರಾಜು ಮಾಡದೆ, ಚೆಕ್ಕನ್ನು ಬ್ಯಾಂಕಿಗೆ ಸಲ್ಲಿಸಿದ್ದಾರೆ. ನಿಪಿ.1 ಚೆಕ್ಕಿಗೆ ಸಂಬಂಧಿಸಿದಂತೆ ಯಾವುದೇ ಹಣವನ್ನು ಕೊಡಲು ನಾನು ಭಾದ್ಯಸ್ಥನಲ್ಲ. ನಾನು ದೂರುದಾರರಿಗೆ ಕೊಡಬೇಕಾದ ಹಣವನ್ನು ಮೊದಲೇ ಸಂದಾಯ ಮಾಡಿದ್ದೇನೆ.'** ಎಂದು ನುಡಿದ ಸಾಕ್ಷ್ಯ ಸರಿ ಇದೆ. ನಾನು ದೂರುದಾರರಿಗೆ ಕೊಡಬೇಕಾದ ಹಣವನ್ನು ಮೊದಲೇ ಸಂದಾಯ ಮಾಡಿದ ಬಗ್ಗೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಲಿಲ್ಲ. ನಿಪಿ.8 ಮತ್ತು 9 ಇನ್‌ವಾಯ್ಸಗಳನ್ನು ಹೊರತುಪಡಿಸಿ ಉಳಿಕೆ ಹಣವನ್ನು ನಾನು ಸಂದಾಯ ಮಾಡಿದ್ದೇನೆಂದು ಸಾಕ್ಷಿಯು ಮುಂದುವರೆದು ಹೇಳುತ್ತಾರೆ.

5. ದೂರುದಾರ ಸಂಸ್ಥೆಯ ಶಾಖಾ ವ್ಯವಸ್ಥಾಪಕರು ನನ್ನ ಮನೆಗೆ ಬಂದ ಸಂದರ್ಭದಲ್ಲಿ ನನಗೆ ಸೇರಿದ ಐದು ಚೆಕ್ಕುಗಳನ್ನು ಅವರು ತೆಗೆದುಕೊಂಡು ಹೋದ ಬಗ್ಗೆ ನಾನು ಅವರ ವಿರುದ್ಧ ಪೊಲೀಸರಿಗೆ ದೂರು ಕೊಡಲಿಲ್ಲ. ನಿಪಿ.1 ಚೆಕ್ಕನ್ನು ನಾನೇ ಖುದ್ದಾಗಿ ದೂರುದಾರರಿಗೆ ಕೊಟ್ಟಿದ್ದೇನೆಂದರೆ ಸರಿಯಲ್ಲ. ದೂರುದಾರರು ನನಗೆ ಪೂರೈಕೆ ಮಾಡಿದ ಕರ್ಪೂರದ ಪೌಡರಿನಲ್ಲಿ ಯಾವುದೇ ರೀತಿಯ ಲೋಪದೋಷ ಇರಲಿಲ್ಲವೆಂದರೆ ಸರಿಯಲ್ಲ. ದೂರುದಾರರಿಗೆ ಕೊಡಬೇಕಾಗಿದ್ದ ಬಾಕಿ ಹಣವನ್ನು ಹಿಂತಿರುಗಿಸದೇ ಮೋಸ ಮಾಡಬೇಕೆನ್ನುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಒಂದೊಮ್ಮೆ ಮಾಲನ್ನು ಹಿಂತಿರುಗಿಸಿದ್ದಲ್ಲಿ ಅದು statement ನಲ್ಲಿ ದಾಖಲಾಗುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸ.ಇದೆ**

**14 ನೇ ಅ.ಮು.ನ್ಯಾ.ದಂ, ಬೆಂಗಳೂರು**

This is a True Copy of the Court Records Online. Authenticated @ districts.ecourtsindia.com/cnr/KABC0C0355092023/truecopy/order-5.pdf